ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1120(1555)**
ಸದಸ್ಯರ ಹೆಸರು **ಶ್ರೀ ಐವಾನ್ ನಿಗ್ಲಿ (ನಾಮಾಂಕಿತ)**
ಉತ್ತರಿಸುವ ಸಚಿವರು **ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಎ) ಪ್ರಸಿದ್ಧ ಪ್ರವಾಸಿ ಗಿರಿಧಾಮಗಳಿಗೆ ಪ್ರವಾಸಿಗರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ರೋಪ್‌ವೇ ಅಳವಡಿಸುವ ಪ್ರಸ್ತಾವನೆ ಸರ್ಕಾರದಲ್ಲಿದೆಯೇ?

ಹೌದು ಚಾಮುಂಡಿಬೆಟ್ಟ, ನಂದಿಬೆಟ್ಟ ಮತ್ತು ಜೋಗ್‌ಫಾಲ್ಸ್‌ಗೆ ರೋಪ್‌ವೇ ಅಳವಡಿಕೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ

ಬಿ) ಇದಕ್ಕೆ ಖಾಸಗಿ ಸಹಭಾಗಿತ್ವವನ್ನು ಆಹ್ವಾನಿಸಲಾಗುವುದೇ? ಅಥವಾ ನಿರ್ಮಾಣ, ನಿರ್ವಹಣೆಯನ್ನು ಸರ್ಕಾರವೇ ಕೈಗೊಳ್ಳುವುದೇ?

ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣ, ಒಡೆತನ ನಿರ್ವಹಣೆ ಹಾಗೂ ವರ್ಗಾವಣೆ ಆಧಾರದ ಮೇಲೆ ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ

ಸಿ) ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗಿದೆ?

ಆಡಳಿತಾತ್ಮಕ ಪರಿಶೀಲನೆ ಹಂತದಲ್ಲಿದೆ

ಡಿ) ಈ ಪ್ರಸ್ತಾವನೆಯಲ್ಲಿ ನಂದಿ ಗಿರಿಧಾಮವೂ ಸೇರಿದೆಯೇ?

ಹೌದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1122(1557)**
ಸದಸ್ಯರ ಹೆಸರು **ಶ್ರೀ ಕೃಷ್ಣಪಾಲೇಮಾರ್ ಜೆ(ಸೂರತ್ಕಲ್)**
ಉತ್ತರಿಸುವ ಸಚಿವರು **ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಕೇಂದ್ರಗಳೆಂದು ಘೋಷಿಸಿರುವ ಮತ್ತು ಘೋಷಿಸಲು ಗುರುತಿಸಿರುವ ಸ್ಥಳಗಳು ಯಾವುವು,

ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಸುಮಾರು 20 ಸ್ಥಳಗಳನ್ನು ಪ್ರವಾಸಿ ಕೇಂದ್ರಗಳೆಂದು ಗುರುತಿಸಲಾಗಿದೆ ಅವುಗಳಲ್ಲಿ ಮುಖ್ಯವಾಗಿ ಕಾರ್ಕಳ, ಉಡುಪಿ, ಕುಂದಾಪುರ, ಮರವಂತೆ, ಸೆಂಟ್ ಮೆರೀಸ್ ದ್ವೀಪ, ಕೊಲ್ಲೂರು, ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ವೇಣೂರು, ಪಣಂಬೂರು, ಉಳ್ಳಾಳ, ಮೂಡಬಿದರೆ